ಕಣ್ಣಾಸೆಲ್ವಿ ಪಳನಿಯ ಪ್ರೇಮಾಂಕುರವು ಅವರಿಬ್ಬರ ಅಂತರಂಗದ ಮೂಲಕ ಎಂಬುದಕ್ಕಿಂತ ತಮಿಳು ಸಿನಿಮಾ ಸ್ಟಾರ್ ಚಂದ್ರಾಸಾರ್ ಅವರನ್ನು ನೋಡುವ ಉತ್ಕಟ ಆಕಾಂಕ್ಷೆಯ ಮುಖೇನ ಬೆಳೆಯಿತು. ಚಿನ್ನಪಳನಿಯೊಂದಿಗೆ ಇಷ್ಟಿಷ್ಟೇ ಹನಿಹನಿ ಮಾತುಕತೆ ಆರಂಭವಾಗುವಲ್ಲಿ, ಕಣ್ಣಾಸೆಲ್ವಿಗೆ ರಾತ್ರಿಯೂ ಅದೇ ಕನಸು ಬೀಳತೊಡಗಿತು.

★★★

ಪ್ರೇಮ ಪತ್ರ ಹಿಡಿದುಕೊಂಡು ಪಳನಿ ಆಕಾಶ ಮಾರ್ಗದಿಂದ ಹಾರಿ ಬಂದೇಬಿಟ್ಟ. ಕಾದಲನೇ ಕಣ್ಣೆದುರಲ್ಲಿ ನಿಂತಿರಬೇಕಾದರೆ ಪತ್ರವೇಕೆಂದು ಕಣ್ಣಾಸೆಲ್ವಿ ಅವನ ಕೈಯ್ಯನ್ನೇ ಅವುಕಿ ಹಿಡಿದಳು. ಪಳನಿ ತನ್ನ ಪ್ರೇಮ ನಿವೇದನೆಯನ್ನು ಪತ್ರ ಮುಖೇನವೇ ನೀಡುವುದೆಂದು ಬಂದರೆ ಪ್ರಥಮ ಭೇಟಿಯಲ್ಲೇ ಬಯಸಿದವಳು ಕೈಯ್ಯನ್ನು ಸುವಾಸನಾಭರಿತ ಹೂವಿನಂತೆ ಸ್ಪರ್ಶಿಸಿಬಿಟ್ಟಳಲ್ಲ! ಅವನ ಮೈ ರೋಮಕೋಟಿಯೆಲ್ಲ ಕೆಂಪು, ಹಳದಿ ದಾಸವಾಳ ಹೂವಿನ ಕೇಸರಗಳಂತೆ ಸೆಟೆದುಕೊಂಡವು. ಇಂಥ ವೇಳೆ ಪ್ರೇಮಪತ್ರದೊಳಗಿನ ಹಾಡನ್ನೇ ಹಾಡುತ್ತ ತಾವಿಬ್ಬರೂ ಕ್ರಮಿಸಬೇಕಾದ ದಿಕ್ಕು ದೆಸೆ ಯಾವುದೆಂದು ಕ್ಷಣಕಾಲ ಯೋಚಿಸಿದರು. ದೇವರೇ ಪ್ರೇಮೋನ್ಮಾದದಲ್ಲಿ ಎಲ್ಲವೂ ಅಲ್ಲಲ್ಲಿಯೇ ಮರೆತು ಹೋಗುತ್ತದೆ! ತಮ್ಮಿಬ್ಬರ ಗುರಿ ಬಹುದೂರದ ಮದರಾಸು ಸಿಟಿಯತ್ತ ಅಲ್ಲವೆ? ಕೈ ಕೈ ಹಿಡಿದು ಬಸ್ಸು ಹತ್ತಿದರೆ ಅದರೊಳಗೋ ನೂಕು ನುಗ್ಗಲು. ಸಾಮೀಪ್ಯ ಸಿಗದೆ ಇಬ್ಬರೂ ಎತ್ತೆತ್ತಲೋ ನಿಲ್ಲಬೇಕಾಯಿತು. ಪ್ರಯಾಣವೂ ನಿಧಾನ. ಬಸ್ಸಿಗೆ ವೇಗವೇ ಇಲ್ಲ. ಆಮೇಲೆ ರೈಲು ಹತ್ತಿದ್ದಾಯಿತು. ಅದೂ ನಿಂತು ನಿಂತು ಹರಿಯುತ್ತಿದೆ.

ಬೆಳಗಾಗುವುದು ಇನ್ನೂ ಇದೆ ಅನ್ನುವಷ್ಟರಲ್ಲಿ ಅಗೋ ದೂರದಲ್ಲಿ ತಮ್ಮ ಸ್ವಾಗತಕ್ಕೆ ಮೈಲುಗಟ್ಟಲೆ ಸಾಲುದೀಪ ಹಚ್ಚಿಟ್ಟಂತೆ ಮದರಾಸು ನಗರ ಕಂಡೇಬಿಟ್ಟಿತು. ಯಾವ ಬೀದಿ ಎಲ್ಲಿಗೆ ಹೋಗುತ್ತದೋ ನೋಡಿದರೆ ಅವುಗಳ ಉದ್ದ ಮುಗಿಯುವಂತೆಯೇ ಇಲ್ಲ. ಯಾರ ಮುಖವೂ ಕಾಣುವುದಿಲ್ಲವೆಂಬಂತೆ ಅವರಿಗವರೇ ಮಾತಾಡಿಕೊಂಡು ಸಾಗುವ ಜನ. ಸದ್ದಿನ ಮೇಲೆ ಸದ್ದು ಮಾಡಿಕೊಂಡು ಸರಿದಾಡುವ ಬಸ್ಸು, ಕಾರು. ಸಾವಿರ ಸಾವಿರ ಯುವಕರ ಬೈಕು ಸವಾರಿ... ಮದರಾಸಿಗೆ ಹೋದ ಒಂದೇ ವರ್ಷದಲ್ಲಿ ತನ್ನ, ಚಿನ್ನಪಳನಿಯ ವಾಸ ಭವ್ಯ ಬಂಗಲೆಯಲ್ಲಿ! ಮೆಚ್ಚಿನ ಸ್ಟಾರ್‌ಗಳೆಲ್ಲ ಮನೆಗೇ ಬರುವ ಸುದ್ದಿ! ಪ್ರೀತಿಯ ಪಳನಿಯ ನೃತ್ಯ ಖ್ಯಾತಿ ಇಷ್ಟು ಬೇಗ ತಮಿಳುನಾಡಿನಾದ್ಯಂತ ಹಬ್ಬಿಬಿಟ್ಟಿತೇ, ಕಡವುಳೇ, ವೇಲ್‌ಮುರುಘಾ ನಿನ್ನ ಕೃಪೆ ಅದೆಷ್ಟು ಘನಥರವಾದುದು!

★★★

ಸದ್ದೋ ಸದ್ದು! ಬೆಳ್ಳಂಬೆಳಗ್ಗೆಯೇ ನಿತ್ಯದಂತೆ ಹೆಣದ ಮೆರವಣಿಗೆ. ನೋಡಿದರೆ ಅಲ್ಲಿಯೇ ಪಳನಿ ಕುಣಿಯುತ್ತಿದ್ದಾನೆ. ಸರಿ, ಹೆಣ ಸುಡುವುದೋ, ಹುಗಿಯುವುದೋ ಎಲ್ಲ ಆದ ಮೇಲೆ ಶವದ ಸಂಬಂಧಿಕರು ಕೊಡುತ್ತಿದ್ದ ಹಣವನ್ನು ಜೇಬಿಗೆ ಇಳಿಬಿಡುವಾಗ ಪಳನಿ, 'ನೋಡುತ್ತಿರು ಇದು ಯಾವ ಜುಜುಬಿ ಸಂಪಾದನೆ. ನಾನು ಮದರಾಸಿಗೆ ಹೋದ ಮೇಲೆ ಕಥೆ ಇರುವುದು! ನನ್ನ ಓಡಾಟ ಏನಿದ್ದರೂ ಏರೋಪ್ಲೇನು ಹತ್ತಿಯೇ' ಎಂದರೆ, ಸೆಲ್ವಿ 'ಅಡೇ ರಾತ್ರಿಯಿಲೆ ಎನಕ್ಕು ಅದೇ ಕನವು' ಎಂದಳು. ಆದರೆ 'ನಿನ್ನೊಂದಿಗೆ ನಾನೂ ಮದರಾಸಿಗೆ ಪ್ರಯಾಣ ಮಾಡಿದ್ದೆ' ಎಂಬ ಕನಸಿನ ಗುಟ್ಟು ಬಿಟ್ಟುಕೊಡಲಿಲ್ಲ. ಇಷ್ಟಾಗಿ ಸೆಲ್ವಿಯ ಸಮ್ಮುಖದಲ್ಲಿ ಚಿನ್ನಪಳನಿಯ ಹಾವಭಾವ ವಿಲಾಸ ವಿಭ್ರಮ ಮತ್ತು ಮಾತುಕತೆ ಇದೆಲ್ಲವೂ ಸಿನಿಮಾ ಮಾದರಿಯಲ್ಲೇ ಇರುತ್ತಿದ್ದವು ಎಂಬುದನ್ನು ಇಲ್ಲಿ ಪ್ರತ್ಯೇಕ ವಿವರಿಸಬೇಕಿಲ್ಲ!

ಒಂದೊಂದು ದಿನ ಪಳನಿ ಪ್ರೇಮ ಸಲ್ಲಾಪದ ನಡುವೆಯೇ ಇದ್ದಕ್ಕಿದ್ದಂತೆ ಏನೋ ನೆನಪು ಬಂದಂತಾಗಿ, 'ಅಡೇ ಸೆಲ್ವಿ ಇವತ್ತು ನಮ್ಮ ಚಂದ್ರಾ ಸಾರ್ ಅವರ ಹೊಸ ಸಿನಿಮಾ ರಿಲೀಜು. ಎಲ್ಲ